ಪಿಡಬ್ಲ್ಯೂಃ 1

ಇಂದು ದಿನಾಂಕಃ 13.12.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**<u>ಪಾಟೀ ಸವಾಲುಃ</u>** ಪ್ರತಿವಾದಿಯ ಪರ ಶ್ರೀ. ಹೆಚ್.ಎಫ್.ಡಬ್ಲ್ಯೂ. ವಕೀಲರಿಂದಃ

1. ನಾನು ಎಸ್.ಎಸ್.ಎಲ್.ಸಿ., ಓದಿರುತ್ತೇನೆ. ಮುಖ್ಯ ಸಾಕ್ಷ್ಯ ಪ್ರಮಾಣ ಪತ್ರಕ್ಕೆ ಮಾಹಿತಿ ನಾನೇ ನೀಡಿರುತ್ತೇನೆ. ಮೂಲತಃ ದಾವಾ ಆಸ್ತಿಯು ಆದಮಖಾನರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ದಿನಾಂಕಃ 05.12.1987 ರಲ್ಲಿ ಆದಮಖಾನರವರ ಮಗಳಾದ ಹಾಜರಾಂಬಿರವರು ಹಕ್ಕು ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿ. ಅದೇ ದಿನ ಹಾಜರಾಂಬಿರವರು ದಾವಾ ಅಸ್ತಿಯ ಸ್ವಾಧೀನ ಪಡೆದುಕೊಂಡಿರುತ್ತಾರೆ.

2. ಆದಮಖಾನರವರು ತಮ್ಮ ಜೀವಿತಾವಧಿಯಲ್ಲಿ ದಾವಾ ಆಸ್ತಿಯನ್ನು ಹಾಜರಾಂಬಿರವರಿಗೆ ಕೊಟ್ಟಿರುವುದರಿಂದ ನನಗೆ ಹಕ್ಕಿಲ್ಲ ಎಂದರೆ ಸರಿಯಲ್ಲ. ಹಾಜರಾಂಬಿರವರು 1987 ರಲ್ಲಿಯೇ ತಮ್ಮ ಹೆಸರನ್ನು ಹಿರೇಕೆರೂರು ಮಂಡಳ ಪಂಚಾಯತಿಯಲ್ಲಿ ನಮೂದು ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. ಪ್ರತಿವಾದಿ 1 ರವರು ಹಾಜರಾಂಬಿರವರ ತಮ್ಮ ಎಂದರೆ ಸರಿ. ಹಾಜರಾಂಬಿರವರು ಪ್ರತಿವಾದಿಯರ ಮೇಲಿನ ಪ್ರೀತಿಯಿಂದ ಹಾಗೂ ಪ್ರತಿವಾದಿಯರು ಸಹಾಯ ಮಾಡಿದ್ದರಿಂದ ಅವರಿಗೆ ಹಕ್ಕು ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

3. ದಿನಾಂಕಃ 10.02.1989 ರಂದು ಹಾಜರಾಂಬಿರವರು ಪ್ರತಿವಾದಿಯರ ಸ್ವಾಧೀನಕ್ಕೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯು ಹಕ್ಕುಬಿಟ್ಟುಕೊಟ್ಟ ಪತ್ರದ ಆಧಾರದ ಮೇಲೆ ಮಂಡಳ ಪಂಚಾಯತ ಹಿರೇಕೆರೂರಿನಲ್ಲಿ ತಮ್ಮ ಹೆಸರನ್ನು ನಮೂದು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಎಲ್ಲಿಯೂ ಪ್ರಶ್ನಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಸ್ವಲ್ಪ ಕ್ಷೇತ್ರ ಮಾರಾಟ ಮಾಡಿದ್ದು, ಖರೀದಿದಾರರನ್ನು ಪಕ್ಷಕಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

4. ನಾವು ದಾವಾ ಆಸ್ತಿಯ ಕಬ್ಜಾ ವಹಿವಾಟಿನಲ್ಲಿ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಕಬ್ಜಾ ತಪ್ಪಿಸುವ ಉದ್ದೇಶದಿಂದ ಸದರಿ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಈಗಲೂ ಸಹ ಪ್ರತಿವಾದಿಯೇ ದಾವಾ ಆಸ್ತಿಯ ಕಬ್ಜಾ ವಹಿವಾಟಿನಲ್ಲಿದ್ದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ
Sd/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.